1	2	3	4
		ನಂಜನಗೂಡು ಮಾರ್ಗವಾಗಿ ಒಮ್ಮಟ್ಟೂರು ಮತ್ತು ಕೌಲಂಡೆ ರಸ್ತೆ ಅಭಿವೃದ್ಧಿ –6 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	
2.	ಗುಂಡ್ಲುಪೇಟೆ	ಚಾಮರಾಜನಗರ –ಚಾಮರಾಜನಗರ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ – 9.7 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	50.00
3.	ಕೊಳ್ಳೇಗಾಲ	ಕೊಳ್ಳೇಗಾಲ ತಾಲ್ಲೂಕು ಸತ್ಯಗಾಲ ಹ್ಯಾಂಡ್ ಪೋಸ್ಟ್ ನಿಂದ ಭರ ಚುಕ್ಕಿ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ 4.35 ಕಿ.ಮೀ. (ಆಯ್ದ ಭಾಗಗಳ ಅಭಿವೃದ್ಧಿ)	30.00
4.	ಹನೂರು	ಕೊಳ್ಳೇಗಾಲ ತಾಲ್ಲೂಕು ಕೊಳ್ಳೇಗಾಲ – ಚಲ್ಲಪಾಳ್ಯ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ 7.1 ಕಿ.ಮೀ. ಆಯ್ದ ಭಾಗಗಳ ಅಭಿವೃದ್ಧಿ)	80.00
5.	ಚಾಮರಾಜನಗರ	ಸರಗೂರು – ಹನೂರು ರಸ್ತೆ ಅಭಿವೃದ್ಧಿ –8 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	61.00
		ಮೈಸೂರು ಜಿಲ್ಲೆ	
6.	ಬನ್ನೂರು	ತಲಕಾಡು – ಮಡವಾಡಿ – ಬೆಳಕವಾಡಿ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ 11.9 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	80.00
7.	ಟೀ–ನರಸೀಪುರ	ನಂಜನಗೂಡು–ಟೀ–ನರಸೀಪುರ ರಸ್ತೆ ಕಿ.ಮೀ 20.82 ರಿಂದ 27.30 ರಸ್ತೆ ಅಭಿವೃದ್ಧಿ 4.7 ಕಿ.ಮೀ	50.00
8.	ಕೆ.ಆರ್. ನಗರ	ಅಕ್ಕಿಹೆಬ್ಬಾಳ – ಬೀರಯ್ಯ ಸಾಲಿಗ್ರಾಮ ರಸ್ತೆ ಕಿ.ಮೀ 3.22 ರಿಂದ 15.4 ವರೆಗೆ ರಸ್ತೆ ಅಭಿವೃದ್ಧಿ–10.2 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	75.00
9.	ನಂಜನಗೂಡು	ನಂಜನಗೂಡು – ಯೆಡಗಾಲ – ಹುಲಹಳ್ಳಿ – ಹಚ್ಚೀಪುರ ಕಿ.ಮೀ 16.00 ರಿಂದ 27.00 ರಸ್ತೆ ಅಭಿವೃದ್ಧಿ 11 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	55.00

ಚಾಮರಾಜನಗರ ತಾಲ್ಲೂಕಿನಲ್ಲಿ ಕಾಲೋನಿಗಳ ನಿರ್ಮಾಣ

3318 (3764) : ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಯಳಂದೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೊಸ ಕಾಲೋನಿಗಳನ್ನು ನಿರ್ಮಿಸಿ ಬಡ ಫಲಾನುಭವಿಗಳಿಗಾಗಿ ನೀಡಲಾಗಿರುವ ಭೂಮಿಯನ್ನು ಅರಣ್ಯ ಇಲಾಖೆಯೊಡನೆ ಜಂಟಿಯಾಗಿ ಸರ್ವೆ ಮಾಡಿಸಿ, ಹದ್ದಬಸ್ತು ಮಾಡಿಕೊಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು; ಯಾವಾಗ ಮಾಡಲಾಗುವುದು?

ಆ) ಈ ಭೂಮಿಗಳ ಮಂಜೂರಾತಿ ಮಾಡಿದ್ದು ಯಾವಾಗ?

ಇ) ಹದ್ದುಬಸ್ತು ಕಾರ್ಯವನ್ನು ಕಂದಾಯ ಇಲಾಖೆಯೊಡನೆ ಜಂಟಿಯಾಗಿ ಕೈಗೊಳ್ಳಲು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ ಜಂಟಿಯಾಗಿ ಯಾವಾಗ ಈ ಕಾರ್ಯ ಕೈಗೆತ್ತಿಕೊಳ್ಳಲಾಗುವುದು?

ಈ) ಹೊಸ ಕಾಲೋನಿಗಳ ನಿರ್ಮಾಣದ ಸಂದರ್ಭದಲ್ಲಿ ಎಷ್ಟು ಜನ ಫಲಾನುಭವಿಗಳು ಭೂಮಿಯನ್ನು ಪಡೆದಿರುತ್ತಾರೆ. ಅವುಗಳಿಗೆ ನೀಡಲಾಗಿರುವ ಭೂಮಿಯ ವಿಸ್ತೀರ್ಣ ಸಹಿತ ಗ್ರಾಮವಾರು ಫಲಾನುಭವಿವಾರು ನೀಡುವುದು?

ಶ್ರೀ ಎಂ. ಮಲ್ಲಿಕಾರ್ಜುನ್ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಇಲ್ಲ,

ಅಳತೆ ಕಾರ್ಯಕ್ಕೆ ಸಂಬಂಧಿಸಿದ ದಾಖಲಾತಿಗಳಲ್ಲಿ ಕೆಲವು ನ್ಯೂನತೆಗಳಿರುವುದರಿಂದ, ಹದ್ದುಬಸ್ತು ಕಾರ್ಯ ಕೈಗೊಂಡಿಲ್ಲ.

ನ್ಯೂನತೆಗಳನ್ನು ಸರಿಪಡಿಸಿದ ನಂತರ ಹದ್ದುಬಸ್ತು ಕಾರ್ಯವನ್ನು ಪೂರ್ಣಗೊಳಿಸಲಾಗುವುದು.

ಯಳಂದೂರು ತಾಲ್ಲೂಕಿನಲ್ಲಿ ಯಾವುದೇ ಹೊಸ ಕಾಲೋನಿಗಳನ್ನು ನಿರ್ಮಿಸಿರುವುದಿಲ್ಲ.

ಆ) ಚಾಮರಾಜನಗರ ತಾಲ್ಲೂಕಿಗೆ ಸಂಬಂಧಿಸಿದಂತೆ, ದಿ.1.11.1965 ಮತ್ತು 26.12.1977 ರಲ್ಲಿ ಮಂಜೂರು ಮಾಡಲಾಗಿದೆ.

ಯಳಂದೂರು ತಾಲ್ಲೂಕಿಗೆ ಅನ್ವಯಿಸುವುದಿಲ್ಲ.

ಇ) ಹೌದು,

ನ್ಯೂನತೆಗಳನ್ನು ಸರಿಪಡಿಸಿದ ನಂತರ ಹದ್ದುಬಸ್ತು ಕಾರ್ಯಗಳನ್ನು ಪೂರ್ಣಗೊಳಿಸಲಾಗುವುದು.

ಈ) ಚಾಮರಾಜನಗರ ತಾಲ್ಲೂಕಿನ ಮಣಜನೂರು ಸ್ಟೇಟ್ ಫಾರೆಸ್ಟ್ ಸರ್ವೆ ನಂ.1 ರಲ್ಲಿ 1255 ಫಲಾನುಭವಿಗಳಿಗೆ 3892 ಎಕರೆ 31 ಗುಂಟೆ ಜಮೀನು ಮಂಜೂರಾತಿಯಾಗಿರುತ್ತದೆ.

ಯಳಂದೂರು ತಾಲ್ಲೂಕಿನಲ್ಲಿ ಯಾವುದೂ ಇರುವುದಿಲ್ಲ.

ರಾಜ್ಯದಲ್ಲಿ ನಬಾರ್ಡ್ ವತಿಯಿಂದ ನಿರ್ಮಿಸಿದ ಮನೆಗಳು

3319 (3320) : ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಬಾರ್ಡ್ ವತಿಯಿಂದ ಕರ್ನಾಟ ರಾಜ್ಯದಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗಿದೆ?

ಆ) ಈ ರಸ್ತೆಗಳ ನಿರ್ವಹಣೆಯನ್ನು ನಿರ್ವಹಿಸುತ್ತಿರುವವರು ಯಾರು?

ಇ) ಸದರಿ ನಿರ್ಮಿಸಲಾದ ರಸ್ತೆಗಳು ಕಳಪೆ ಗುಣಮಟ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದರೆ, ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ಮೇ– 2003ರ ಅಂತ್ಯಕ್ಕೆ 11316 ಕಿಮೀ ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.